**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಸ್ಪೇಷಲ್ ಕೇಸ್ ನಂ. 208/2019**

ಪ್ರಾ.ಸಾ. 1

ಚಾ.ಸಾ. 2

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 22.10.2024**

| | |
|---|---|
| ಸಾಕ್ಷಿದಾರರ ಹೆಸರು | ರಾಜ ಹಾಳಯ್ಯ |
| ತಂದೆಯ ಹೆಸರು | ಲೇಟ್ ಹಾಳಯ್ಯ |
| ವಯಸ್ಸು | 70 ವರ್ಷ |
| ಉದ್ಯೋಗ | ನಿವೃತ್ತ ಎ ಎಸ್ ಐ |
| ವಾಸ | ಎಂ ಎಂ ಜಿ, ವಿವಿ ಸಿಟಿ, ಬಸ್ತೀಪುರ, ಶ್ರೀರಂಗಪಟ್ಟಣ ತಾಲ್ಲೂಕು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

.1. ಚಾಸಾ.1 ರವರು ಗೊತ್ತು, ಅವರು ಪರಿಶಿಷ್ಟ ಜಾತಿಯವರು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು.

.

.2. ಶ್ರೀಮತಿ ಬಿ.ಎಂ.ರಾಜಮ್ಮ 1 ನೇ ಆರೋಪಿ ನನಗೆ ಮೊಗರಹಳ್ಳಿ ಗ್ರಾಮದ ಸರ್ವೆ ನಂ.50/1 ರಲ್ಲಿ ಎರಡು ಕಾಲು ಗುಂಟೆ ಜಮೀನನ್ನು 2014 ನೇ

ಸಾಲಿನಲ್ಲಿ ಕ್ರಯಕ್ಕೆ ಕೊಟ್ಟಿದ್ದರು. ನನ್ನೊಂದಿಗೆ ಚಾಸಾ.1, ನಾಗರಾಜಶೆಟ್ಟಿ ಜವರಶೆಟ್ಟಿ, ಶಿವಲಿಂಗಯ್ಯ, ಶಿವಪ್ರಕಾಶ್ ಇತರರು ಜಮೀನನ್ನು ಕೊಂಡಿದ್ದರು. ಸದರಿ ಜಮೀನಿನ ಸ್ವಾಧೀನವನ್ನು ಕ್ರಯವಾದ ನಂತರ 1 ನೇ ಆರೋಪಿ ನನಗೆ ಕೊಟ್ಟಿದ್ದರು. ಸರ್ವೆಯರ್ ರವರಿಗೆ ಅಳತೆ ಮಾಡಿ ಕೊಡುವಂತೆ ಅರ್ಜಿ ಸಲ್ಲಿಸಿದ್ದು ಅದರಂತೆ ಅವರು ಸ್ಥಳಕ್ಕೆ ಭೇಟಿ ನೀಡಿ ಅಳತೆ ಮಾಡಿ ಗಡಿ ಕಲ್ಲುಗಳನ್ನು ನೆಟ್ಟಿ ಹೋಗಿದ್ದರು.

.

.3. ದಿನಾಂಕ 13.01.2019 ರಂದು ನನ್ನ ಸ್ವಂತ ಕೆಲಸಕ್ಕೆ ಮೈಸೂರಿಗೆ ಹೋಗಿದ್ದಾಗ ಮದ್ಯಾಹ್ನ 12.30 ಗಂಟೆ ಸಮಯಲ್ಲಿ ನಿವೃತ್ತ ಪಿ ಎಸ್ ಐ ಡಿ.ವಿ.ನಾಗರಾಜು ರವರು ಪೋನು ಮಾಡಿ ಅವರ ಜಮೀನಿಗೆ ಸರ್ವೆ ನಂ.50 ರಲ್ಲಿ ಯಾರೋ ಗಡಿ ಕಲ್ಲು ಕಿತ್ತು ಹಾಕಿದ್ದಾರೆಂದು ತಿಳಿಸಿದ್ದರು, ಆಗ ನಾನು ಜಮೀನಿನ ಹತ್ತಿರ ಹೋದಾಗ ಯಾರೂ ಇರಲಿಲ್ಲ, ಕಲ್ಲುಗಳನ್ನು ಯಾರು ಕಿತ್ತು ಹಾಕಿದ್ದರು ನನಗೆ ಗೊತ್ತಿಲ್ಲ. ಪೊಲೀಸರ ಮುಂದೆ ಬೇರೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಸ್ಥಳದಲ್ಲಿ ನಾನು ಆರೋಪಿತರನ್ನು ನೋಡಿರಲಿಲ್ಲ.

.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

*4.* ದಿನಾಂಕ *13.01.2019* ರಂದು ಜಮೀನಿನ ಹತ್ತಿರ ಹೋದಾಗ ನ್ಯಾಯಾಲಯದ ಮುಂದಿರುವ ಆರೋಪಿತರು ಇದ್ದರು, ಅವರನ್ನು ಏಕೆ ಸೈಟಿನಲ್ಲಿದ್ದ ಕಲ್ಲುಗಳನ್ನು ಕಿತ್ತು ಹಾಕಿದ್ದೀರಾ ಎಂದು ಕೇಳಿದ್ದಕ್ಕೆ ನಾನು ಕ್ರಯಕ್ಕೆ ಕೊಟ್ಟಿರುವ ಜಮೀನಿನಲ್ಲಿ ಕಲ್ಲುಗಳನ್ನು ಹಾಕಿಕೊಳ್ಳದೇ ನಮ್ಮ ಮಕ್ಕಳ ಹೆಸರಿಗೆ ಕೊಟ್ಟಿರುವ ಜಮೀನಿನಲ್ಲಿ ಕಲ್ಲುಗಳನ್ನು ಹಾಕಿ ರಸ್ತೆ ಮಾಡಿದ್ದಾರೆ, ಹೀಗಾಗಿ ನಾವೇ ಕಿತ್ತು ಹಾಕಿದ್ದೇವೆ ಅವರ ಇಷ್ಟ ಬಂದ ಹಾಗೇ ರಸ್ತೆ ಮಾಡಿಸಿದ್ದು, ನಾನು ಉಳಿದ ಪೊಲೀಸರಿಗೆ

ಕೊಡಬೇಕಾಗಿರುವ ಸೈಟುಗಳನ್ನು ಎಲ್ಲಿಂದ ಕೊಡಲಿ ಎಂದು ಹೊರಟು ಹೋದರು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಆರೋಪಿತರನ್ನು ನೋಡಿ ಗುರುತಿಸಿ ಈಗ ಓದಿ ಹೇಳಿದಂತೆ ನಿಪಿ. *1* ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ನಾನು ಹಾಗೂ ಚಾಸಾ. *1* ರವರ ಗಂಡ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿದ್ದರಿಂದ ಸದರಿಯವರಿಗೆ ಸಹಾಯ ಮಾಡಲು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

.

**.ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

.1. ನಾನು ಸ್ಥಳಕ್ಕೆ ಹೋಗಿದ್ದಾಗ ರಸ್ತೆ ಹಾಗೂ ಚರಂಡಿಗಳನ್ನು ಆಗಲೇ ಮಾಡಿಸಲಾಗಿತ್ತು. ಅದನ್ನು ಡಿ.ವಿ.ನಾಗರಾಜು ಹಾಗೂ ಇತರೆ ನಿವೃತ್ತಿ ಪೊಲೀಸರು ಸೇರಿ ಸರ್ವೆ ನಂ.50 ರಲ್ಲಿ 5 ಎಕರೆ 11 ಗುಂಟೆಗೆ ಸೇರಿ ಮಾಡಿಸಿದ್ದರು ಎಂದರೆ ಸರಿ. ಡಿ.ವಿ.ನಾಗರಾಜು ರವರೊಂದಿಗೆ ಸುಮಾರು 12 ಜನರು ಸೇರಿ ರಸ್ತೆ ನಿರ್ಮಾಣ ಮಾಡಿದ್ದರು ಎಂದರೆ ಸರಿ. ಈ ಸಂಬಂಧ ಸದರಿಯವರು ಅಧಿಕೃತ ಪ್ರಾಧಿಕಾರದಿಂದ ಯಾವುದೇ ಅನುಮತಿ ಪಡೆದಿರಲಿಲ್ಲ ಎಂದರೆ ಸರಿ. ಸದರಿ ಸ್ಥಳಕ್ಕೆ ಎಲ್ಲರೂ ಸೇರಿ ಪೊಲೀಸ್ ಬಡಾವಣೆ ಎಂದು ನಾಮಫಲಕ ಹಾಕಿದ್ದೇವೆಂದರೆ ಸರಿ. ಇದಕ್ಕೂ ಯಾರ ಅನುಮತಿ ಪಡೆದಿಲ್ಲ ಎಂದರೆ ಸರಿ. ಸರ್ವೆ ನಂ.50 ರಲ್ಲಿ 1 ನೇ ಆರೋಪಿಯ ಹೆಣ್ಣುಮಕ್ಕಳಿಗೂ 32 ಗುಂಟೆ ಜಮೀನು ಸೇರಿದೆ ಎಂದರೆ ಸರಿ. ಅದರಲ್ಲಿ 4 ಹೆಣ್ಣು ಮಕ್ಕಳು ಎಂಟು ಕಾಲು ಗುಂಟೆಯಂತೆ ಜಮೀನನ್ನು ವಿಭಾಗ ಮಾಡಿಕೊಂಡಿರುತ್ತಾರೆಂದರೆ ಸರಿ. ಅವರುಗಳ ಜಮೀನಿಗೆ ಯಾವತ್ತೂ ಆರೋಪಿತರು ಹಾಗೂ ಅವರ ಕುಟುಂಬದವರು ತೊಂದರೆ ಕೊಟ್ಟಿಲ್ಲ ಎಂದರೆ ಸರಿ. ರಸ್ತೆ ಹಾಗೂ ಚರಂಡಿ ಮಾಡಿದ ಬಗ್ಗೆ 1 ನೇ ಆರೋಪಿ ಹೆಣ್ಣು ಮಕ್ಕಳು ಎಲ್ಲಾ 12 ಜನರ ವಿರುದ್ಧ ದಾವೆ ಹಾಕಿದ ವಿಷಯ ನನಗೆ ಗೊತ್ತಿಲ್ಲ. ಸರ್ವೆ ದಾಖಲೆಗಳಿಗೂ ಕ್ರಯ ಪತ್ರಕ್ಕೂ ಅನುಭೋಗಕ್ಕೂ ಚೆಕ್ಕುಬಂದಿಯ ಅಳತೆಯಲ್ಲಿ ವ್ಯತ್ಯಾಸ ಇರುವ ಬಗ್ಗೆ ಡಿಡಿಎಲ್ ಆರ್ ನಲ್ಲಿ ಕೇಸು ನಡೆಸುತ್ತಿದ್ದಾರೆಂದರೆ ಸರಿ. ಸದರಿ ಸರ್ವೆ ನಂಬರಿನಲ್ಲಿ ಚಾಸಾ.1 ರವರಿಗೆ ಅವರ ಜಮೀನು ನಿರ್ದಿಷ್ಟವಾಗಿ ಎಲ್ಲಿ ಬರುತ್ತದೆಂದು ಗೊತ್ತಿಲ್ಲ ಎಂದರೆ ಸರಿ. ಸರ್ವೆ ನಂ.50 ರ 5 ಎಕರೆ 11 ಗುಂಟೆ ಜಮೀನು ಪೂರ್ತಿ ಖಾಲಿ ಇದ್ದು, ಯಾವುದೇ ಕಟ್ಟಡ ಇಲ್ಲ ಎಂದರೆ ಸರಿ. ಯಾರ ಕ್ರಯದಾರರ ನಿವೇಶನಕ್ಕೂ ಸರ್ವೇಯರ್ ರವರು ಬಂದು ಗಡಿ ಕಲ್ಲುಗಳನ್ನು ನೆಟ್ಟಿಸಿರುವುದಿಲ್ಲ ಎಂದರೆ ಸರಿ. ನಿವೃತ್ತಿ ಪೊಲೀಸ್ ಅಧಿಕಾರಿಗಳು ಕೆಲವು ಸಿವಿಲ್ ಪ್ರಕರಣಗಳನ್ನು ಕ್ರಿಮಿನಲ್ಲಿ ಪ್ರಕರಣಗಳಾಗಿ ಸೃಷ್ಟಿಸಿರುವ

ವಿಷಯ ನನಗೆ ಗೊತ್ತು ಎಂದರೆ ಸರಿ. ಅಲ್ಲಿ ಯಾವುದೇ ಕಲ್ಲುಗಳು ಇರಲಿಲ್ಲ ಅವುಗಳನ್ನು ಕಿತ್ತು ಹಾಕಿರಲಿಲ್ಲ ನಷ್ಟ ಉಂಟು ಮಾಡುವ ಯಾವುದೇ ಕುರುಹುಗಳು ಇರಲಿಲ್ಲ ಎಂದರೆ ಸರಿ.

. (ಮರು ವಿಚಾರಣೆಃ ಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.